ಸಂಖ್ಯೆ:ಪಪೂಶಿಇ/ಶೈಸಾ/ಎಂಪ್ರಿ/10/2015-16

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-12.
ದಿನಾಂಕ: 14-09-2015.

ಜಿಲ್ಲಾ ಉಪನಿರ್ದೇಶಕರು,

ಮಾನ್ಯರೆ,

ವಿಷಯ: ಭೂ ರಕ್ಷಣೆ ಹಾಗೂ ಪರಿಸರ ಸಬಲೀಕರಣಕ್ಕೆ ಪೂರಕವಾಗಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯ ಸಹಯೋಗದೊಡನೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ನೇತೃತ್ವದಲ್ಲಿ ಕಾಲೇಜುಗಳ ಮುಖ್ಯಸ್ಥರಿಗೆ ಅರಿವು ಮೂಡಿಸುವ ಕಾರ್ಯಗಾರಗಳನ್ನು ಏರ್ಪಡಿಸುವ ಬಗ್ಗೆ

***

ಮೇಲ್ಕಂಡ ವಿಷಯ ಮತ್ತು ಉಲ್ಲೇಖಿದನ್ವಯ ಮಾನ್ಯ ಶಿಕ್ಷಣ ಸಚಿವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ತಮ್ಮ ಟಿಪ್ಪಣಿ ಸಂಖ್ಯೆ: ಪ್ರಾ.&ಪ್ರೌ.ಶಿಕ್ಷಣ/ಸಂ.724/2015 ದಿನಾಂಕ:11.08.2015ರಂದು ಈಶ್ವರ ಪ್ರಸಾದ್, ಕಾರ್ಯದರ್ಶಿ, ಪರಿಸರ-ನಿಸರ್ಗ ಸಂರಕ್ಷಣಾ ಸಂಸ್ಥೆ ಸ್ಫೂರ್ತಿವನ, ಸಿಜೆಎಫ್, ಬೆಂಗಳೂರು ಜಲಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರ ಪತ್ರದನ್ವಯ ಭೂ ರಕ್ಷಣೆ ಹಾಗೂ ಪರಿಸರ ಸಬಲೀಕರಣಕ್ಕೆ ಪೂರಕವಾಗಿ ರಾಜ್ಯ ಶಿಕ್ಷಣ ಸಂಶೋಧನ ಮತ್ತು ತರಬೇತಿ ಸಂಸ್ಥೆಯ ಸಹಯೋಗದೊಡನೆ ಪದವಿ ಪೂರ್ವ ಶಿಕ್ಷಣ ಇಲಾಖೆಯ 31 ಜಿಲ್ಲಾ ಉಪನಿರ್ದೇಶಕರ ನೇತೃತ್ವದಲ್ಲಿ ಕಾಲೇಜುಗಳ ಮುಖ್ಯಸ್ಥರಿಗೆ ಭೂರಕ್ಷಣೆ ಹಾಗೂ ಪರಿಸರ ಸಬಲೀಕರಣಕ್ಕೆ ಅರಿವು ಮೂಡಿಸುವ ಕಾರ್ಯಗಾರಗಳನ್ನು ಪ್ರತಿ ಜಿಲ್ಲಾ ಕೇಂದ್ರದಲ್ಲಿ ಆಯೋಜಿಸುವ ಗುರಿ ಹೊಂದಿದ್ದಾರೆ ಎಂದು (ಸನ್ಮಾನ್ಯ ಸಚಿವರ ಟಿಪ್ಪಣಿ ಲಗತ್ತಿಸಿದೆ) ಮತ್ತು ಸದರಿ ಕಾರ್ಯಗಾರವನ್ನು ಜಿಲ್ಲಾ ಕೇಂದ್ರಗಳಲ್ಲಿ ಆಯೋಜಿಸಲು ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರ ಸಹಕಾರವನ್ನು ಕೋರಿರುತ್ತಾರೆ.

ಆದ್ದರಿಂದ ಪರಿಸರ ಸಬಲೀಕರಣಕ್ಕೆ ಅರಿವು ಮೂಡಿಸುವ ಕಾರ್ಯಗಾರಗಳನ್ನು ತಮ್ಮ ಜಿಲ್ಲಾ ಕೇಂದ್ರದಲ್ಲಿ ಆಯೋಜಿಸುವ ಕುರಿತು ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಕಾರ್ಯಗಾರವನ್ನು ಏರ್ಪಡಿಸಲು ಸಹಕಾರವನ್ನು ನೀಡುವ ಮೂಲಕ ಕಾರ್ಯಗಾರಗಳನ್ನು ಯಶಸ್ವಿಗೊಳಿಸಲು ಈ ಮೂಲಕ ಸೂಚಿಸಲಾಗಿದೆ.

ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1) ಮಾನ್ಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ ರವರ ಮಾಹಿತಿಗಾಗಿ.
2) ಮಾನ್ಯ ಶ್ರೀ ಈಶ್ವರ ಪ್ರಸಾದ್, ಕಾರ್ಯದರ್ಶಿಗಳು, ಪರಿಸರ-ನಿಸರ್ಗ ಸಂರಕ್ಷಣಾ ಸಂಸ್ಥೆ ಸ್ಫೂರ್ತಿವನ, ಸಿಜೆಎಫ್, ಬೆಂಗಳೂರು ರವರಿಗೆ ಮಾಹಿತಿಗಾಗಿ.
3) ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
4) ಕಛೇರಿ ಪ್ರತಿ.

ಕಿಮ್ಮನೆ ರತ್ನಾಕರ್
ಡಾ. ಚಂದ್ರಶೇಖರ ಕಂಬಾರ
ಹಂಪ ನಾಗರಾಜಯ್ಯ
ಚಿರಂಜೀವಿ ಸಿಂಗ್
ವಿಜಯ್ ಗೋರೆ
ಡಾ. ಬಿ ಎಲ್ ಶಂಕರ್
ನಾಗೇಶ ಹೆಗಡೆ
ಈಶ್ವರ್ ಪ್ರಸಾದ್

ಪರಿಸರ PARISARA

**ಪರಿಸರ**-ನಿಸರ್ಗ ಸಂರಕ್ಷಣಾ ಸಂಸ್ಥೆ
ಸ್ಫೂರ್ತಿವನ, ಸಿ.ಜಿ.ಎಫ್, ಬೆಂಗಳೂರು ಜಲಮಂಡಲಿ
18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055
9448077019, 080 23340881
www.parisara.in, parisara1989@gmail.com

# ಮನವಿ

ಮಾನ್ಯರೆ,

ಸುಮಾರು ಮುನ್ನೂರು ಕೋಟಿ ವರ್ಷಗಳ ಭೂಮಿಯ ಜೀವವಿಕಾಸ ಚರಿತ್ರೆಯಲ್ಲಿ, ನಾವು ಮನುಷ್ಯರು ಮಾತ್ರ ಬುದ್ಧಿವಂತ ಪ್ರಾಣಿಯಾಗಿ ವಿಕಾಸಗೊಂಡಿದ್ದೇವೆ. 100 ವರ್ಷಗಳಿಂದೀಚೆಗೆ ನಮ್ಮವರ ಸಂಖ್ಯೆಯನ್ನು ಆರು ಪಟ್ಟು ಹೆಚ್ಚಿಸಿಕೊಂಡ ನಾವು, ನಮ್ಮ ಸಾಧನ ಸಾಮರ್ಥ್ಯವನ್ನು ಸಾವಿರಾರು ಪಟ್ಟು ಹೆಚ್ಚಿಸಿಕೊಂಡಿದ್ದೇವೆ. ಪೆಟ್ರೋಶಕ್ತಿಯಿಂದಾಗಿ ಸಾವಿರ ಜನರ ತೋಳ್ಬಲ ಪ್ರತಿಯೊಬ್ಬನಿಗೂ ಬಂದಿದೆ. ಸಂಪರ್ಕ ತಂತ್ರಜ್ಞಾನದಿಂದಾಗಿ ನಮ್ಮ ಲಕ್ಷಾಂತರ ಮಿದುಳುಗಳು ಒಟ್ಟಾಗಿ ಕೆಲಸ ಮಾಡತೊಡಗಿವೆ. ಈ ಎಲ್ಲ ಬಲಗಳಿಂದ ಮಹಾನ್ ಶಕ್ತಿಯಾಗಿ ರೂಪುಗೊಂಡ ನಾವು, ನಮ್ಮನ್ನು ಸೃಷ್ಟಿಸಿದ ಭೂಮಿಯನ್ನು ಹಲವಾರು ಬಾರಿ ನಾಶ ಮಾಡಬಲ್ಲ ಅಸ್ತ್ರಗಳನ್ನು ತಯಾರಿಸಿಕೊಂಡು, ಶತ್ರುವಿಲ್ಲದ ಸಮರಕ್ಕೆ ಸನ್ನದ್ಧರಾಗಿದ್ದೇವೆ.

ಈಗ, ನಮ್ಮ ಪೃಥ್ವಿಯ ಜೀವ ಮಂಡಲ ಹೈರಾಣಾಗಿ, ತತ್ತರಿಸುತ್ತಿದೆ. ಹೊಸದೊಂದು ಜಾಗತಿಕ ಸಂಕಟದ ಲಕ್ಷಣಗಳು ಕಾಣತೊಡಗಿವೆ. ಈ ಸಂಕಟವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಕರೆ ನೀಡಿರುವ ವಿಶ್ವಸಂಸ್ಥೆಯು, ಇದಕ್ಕಾಗಿ ವರ್ಷದುದ್ದಕ್ಕೂ ನಾನಾ ಪರಿಸರ ದಿನಗಳ ಆಚರಣೆಗಳನ್ನು ನಿಗದಿಗೊಳಿಸಿದೆ. ಭಾರತ ಸರಕಾರವೂ ಈ ದಿನಗಳಿಗೆ ಮಾನ್ಯತೆ ನೀಡಿ, ತಾನೂ ಒಂದೆರಡು ವಿಶೇಷ ಪರಿಸರ ದಿನಗಳನ್ನು ನಿಗದಿಗೊಳಿಸಿದೆ. ಆದರೆ ನಮ್ಮ ಶೈಕ್ಷಣಿಕ ಪಠ್ಯಗಳಲ್ಲಿ, ಬೋಧನಾ ವಿಧಾನಗಳಲ್ಲಿ, ಕ್ಯಾಲೆಂಡರ್, ಪಂಚಾಂಗಗಳಲ್ಲಿ ಇವುಗಳ ಪ್ರಸ್ತಾಪ ಇಲ್ಲವಾದ ಕಾರಣ ಈ ದಿನಗಳ, ದಿನಾಚರಣೆಗಳ ಪರಿಚಯ ನಮಗಿನ್ನೂ ಆಗಿಲ್ಲ.

ಭೂಮಿಯ ಜೀವಪರಂಪರೆ ನಿರಂತರ ಸಾಗಬೇಕು ಹಾಗೂ ಮನುಕುಲದ ನಾಳೆಗಳು ಸುಸ್ಥಿರವಾಗಲೆಂಬ ಉದ್ದೇಶದಿಂದ ಈ ಮಹತ್ವದ ಪರಿಸರ ದಿನಗಳ ಕುರಿತು ಕನ್ನಡಿಗರಿಗೆ ಅರಿವು ಮೂಡಿಸಲು, 'ಪರಿಸರ ಸಂಸ್ಥೆ'ಯು 'ಮನುಕುಲ ರಕ್ಷಣೆಗೆ ಮಹತ್ವದ ದಿನಗಳು' ಎಂಬ ಸಚಿತ್ರ ಗ್ರಂಥ, ಪರಿಸರ ಕ್ಯಾಲೆಂಡರ್ ಹಾಗೂ ಪರಿಸರ ಸಾಕ್ಷ್ಯಚಿತ್ರಗಳಾದ An Inconvenient Truthನ್ನು 'ಒಂದು ನಿಷ್ಠುರ ಸತ್ಯ' ಎಂದು ಮತ್ತು Homeನ್ನು 'ಹೋಂ' ಎಂದು ಕನ್ನಡದಲ್ಲಿ ಸಿದ್ಧಪಡಿಸಿದೆ. (ಮನುಕುಲ ರಕ್ಷಣೆಗೆ ಮಹತ್ವದ ದಿನಗಳು - ಸಚಿತ್ರ ಗ್ರಂಥ ಕುರಿತು, ಕರ್ನಾಟಕ ಸರಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ಪುಸ್ತಕಲೋಕ ಹಾಗೂ ಪ್ರಜಾವಾಣಿ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವಿಮರ್ಶಾ ಪ್ರತಿಗಳನ್ನು ಲಗತ್ತಿಸಿದೆ.)

ಪರಿಸರ ಸಬಲೀಕರಣಕ್ಕೆ ಸಮಗ್ರ ಮಾಹಿತಿ ನೀಡುವ ಈ ಪ್ರಜ್ಞಾಮೂಲಗಳು ಎಲ್ಲ ಶಾಲಾ ಕಾಲೇಜುಗಳಲ್ಲಿ, ಮನೆಗಳಲ್ಲಿ ಇರಬೇಕು. ಇದರಲ್ಲಿರುವ ಮಾಹಿತಿ ಎಲ್ಲರಿಗೆ, ವಿಶೇಷವಾಗಿ ಮಕ್ಕಳಿಗೆ, ಅವರ ಭವಿಷ್ಯ ರೂಪಿಸುವ ಬೋಧಕರ ಹಾಗೂ ಪೋಷಕರ ಮೂಲಕ ತಲುಪಬೇಕು. ಕೇವಲ ತಲುಪಿದರೆ ಸಾಲದು; ಪರಿಸರ ಸಂರಕ್ಷಣೆಯ ತತ್ತ್ವಗಳನ್ನು ಎಲ್ಲರೂ ರೂಢಿಸಿಕೊಳ್ಳಬೇಕು; ನಿತ್ಯ ಬದುಕಿನಲ್ಲಿ ಸ್ಥಾನ ನೀಡಬೇಕು; ಹಸಿರು ಸಂವರ್ಧನೆ, ಅಕ್ಷಯ ಶಕ್ತಿಮೂಲಗಳ ಬಳಕೆ, ಮಳೆ ನೀರಿನ ಸಂಗ್ರಹಣೆ, ನೈಸರ್ಗಿಕ ಸಂಪನ್ಮೂಲಗಳ ಹಿತ-ಮಿತ ಬಳಕೆ, ಮುಂತಾದ ನಮ್ಮ ಪರಂಪರೆಯಲ್ಲಿ ವಿಕಾಸವಾಗಿ ಬಂದಿದ್ದ ಸುಸ್ಥಿರ ಬದುಕಿನ ಚಟುವಟಿಕೆಗಳನ್ನು ಮರುಶೋಧ ಮಾಡಿ, ಮತ್ತೆ ಮತ್ತೆ ಆಚರಣೆಗೆ ತರಲು ಪ್ರೇರೇಪಿಸಬೇಕು.

ಈ ಸದುದ್ದೇಶದ ನಮ್ಮ ಮನವಿಗೆ ಸ್ಪಂದಿಸಿದ ಕರ್ನಾಟಕ ಸರಕಾರದ ಶಿಕ್ಷಣ ಇಲಾಖೆಯು, ಸಂಖ್ಯೆ: ಇಡಿ 70 ಎಂಸಿಡಿ 2015ರ ಸುತ್ತೋಲೆ ಮೂಲಕ 'ಪರಿಸರ' ಸಂಸ್ಥೆ ನಿರ್ಮಿಸಿರುವ ಪ್ರಜ್ಞಾಮೂಲಗಳನ್ನು ಚಾತ್ರ/ಸಂಚಿತ ನಿಧಿಯಿಂದ ಖರೀದಿಸಲು, ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲಾ ಕಾಲೇಜುಗಳ ಮುಖ್ಯಸ್ಥರಿಗೆ, ಉಪನಿರ್ದೇಶಕರು/ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅನುಮತಿ ನೀಡಿದೆ.

ಈ ಪ್ರಜ್ಞಾಮೂಲಗಳು ಆಗಾಗ ಬೋಧಕರ, ವಿದ್ಯಾರ್ಥಿಗಳ ಹಾಗೂ ಪೋಷಕರ ಕಣ್ಣಿಗೆ ಕಂಡಲ್ಲಿ, ಆ ಮಹತ್ವದ ದಿನಗಳಲ್ಲಿ ಭೂಮಿಯ ಯೋಗಕ್ಷೇಮ ಕುರಿತಂತೆ ಚಿಂತನೆ ಹಾಗೂ ಜೀವ ಮಂಡಲ ಸಂರಕ್ಷಣೆ, ಸಂವರ್ಧನೆಗೆ ಸಂಘಟಿತ ಪ್ರಯತ್ನ ನಡೆಯಲಿ ಎಂಬ ಆಶಯ ನಮ್ಮದು.

ಪರಿಸರ ಸಬಲೀಕರಣಕ್ಕೆ ವಿದ್ಯಾರ್ಥಿಗಳಿಗೆ ಮತ್ತವರ ಪೋಷಕರಿಗೆ, ಬದ್ಧತೆಯಿಂದ ಅರಿವು ಮೂಡಿಸುವ ಮೂಲಕ - ನಾಳಿನ ಪೀಳಿಗೆ ಹಾಗೂ ಮನುಕುಲದ ಒಟ್ಟಾರೆ ಕ್ಷೇಮಕ್ಕಾಗಿ ನಾವೆಲ್ಲ ಒಂದಾಗೋಣ ಬನ್ನಿ.

ತಮ್ಮ ವಿಶ್ವಾಸಿಗಳು:

ಕಿಮ್ಮನೆ ರತ್ನಾಕರ್ | ಡಾ. ಚಂದ್ರಶೇಖರ ಕಂಬಾರ | ಹಂಪ ನಾಗರಾಜಯ್ಯ | ಡಾ. ಬಿ ಎಲ್ ಶಂಕರ್

ಚಿರಂಜೀವಿ ಸಿಂಗ್ | ವಿಜಯ್ ಗೋರೆ | ನಾಗೇಶ ಹೆಗಡೆ | ಈಶ್ವರ್ ಪ್ರಸಾದ್